ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಆಂಧ್ರ ಗಡಿ ಪ್ರಾಂತ್ಯದಲ್ಲಿರುವ ಲಂಬಾಣಿ ತಾಂಡಗಳಲ್ಲಿ ಪ್ರಾಥಮಿಕ ಶಾಲೆಗಳ ಮಂಜೂರಿಗಾಗಿ ಪತ್ರದ ದಿನಾಂಕ 14-7-91ರ ಮೇಲೆ ಮಾನ್ಯ ಶಿಕ್ಷಣ ಸಚಿವರು ಆದೇಶ ನೀಡಿದ್ದು ಇಲ್ಲಿಯವರೆಗೆ ಯಾವ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು?

ಆ) ಸೇಡಂ ತಾಲ್ಲೂಕಿನ ಮೇಡಕ್ ಲಂಬಾಣಿ ತಾಂಡಾ ಪಿಲ್ಲಿಗುಂಡ್ಲ ಬೊಂದೆಂಪಲ್ಲಿ ಸಮೀಪ ವೆಂಕಟಾಪುರ ತಾಂಡಾ ಆಂಧ್ರ ಗಡಿ ಪ್ರಾಂತ್ಯದಲ್ಲಿದ್ದು, ನೆರೆ ರಾಜ್ಯದಲ್ಲಿ ಅಭಿವೃದ್ಧಿಯಂತೆ ನಮ್ಮ ರಾಜ್ಯದಲ್ಲಿ ಅಭಿವೃದ್ಧಿಯಾಗಿಲ್ಲವೆಂಬ ಭಾವನೆ ಬರುವುದಿಲ್ಲವೆ?

ಇ) ಶಿಕ್ಷಣ ಸಚಿವರು ಮಾಡಿರುವ ಆದೇಶವನ್ನು ಇಲಾಖೆಯವರು ವಿಳಂಬಗೊಳಿಸಲು ಕಾರಣವೇನು?

ಈ) ಈ ಶಾಲೆಗಳ ಮಂಜೂರಿಗಾಗಿ ಸಹಾಯಕ ಶಿಕ್ಷಣಾಧಿಕಾರಿ ಸೇಡಂ ಇವರು ಶಿಫಾರಸ್ಸು ಸಹ ಮಾಡಿದ್ದು ಇಲ್ಲಿಯವರೆಗೆ ಏಕೆ ಕ್ರಮ ಕೈಗೊಂಡಿಲ್ಲ.

ಉ) ಈ ಗಡಿ ಪ್ರಾಂತ್ಯದ ಮೇಡಕ್ ಲಂಬಾಣಿ ತಾಂಡಾ ಪಿಲ್ಲಿಗುಂಡ್ಲ ತಾಂಡಾ ಬೊಂದೆಪಲ್ಲಿ ಸಮೀಪ ವೆಂಕಟಾಪುರ ತಾಂಡಗಳಲ್ಲದೆ ಚಿತ್ತಾಪುರ ತಾಲ್ಲೂಕಿನ ಬೆಳಗಾಂ ಸಣ್ಣ ತಾಂಡಾ (ಸೇಡಂ ಕ್ಷೇತ್ರ)ದ ಬಗ್ಗೆ ಉಪ ನರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಇವರ ಪತ್ರದ ಪ್ರಕಾರ ಇಲ್ಲಿಯವರೆಗೆ ಈ ತಾಂಡಾಗಳ ಬಗ್ಗೆ ಕ್ರಮ ಕೈಗೊಂಡಿಲ್ಲ ಏಕೆ?

ಊ) ಈಗಲಾದರೂ ಹೈದ್ರಾಬಾದ್ ಕರ್ನಾಟಕ ಗುಲ್ಬರ್ಗ ಜಿಲ್ಲೆಯಲ್ಲಿಯೇ ಹಿಂದುಳಿದ ಪ್ರದೇಶವಾದ ಸೇಡಂ ಮತಕ್ಷೇತ್ರದ ಮೇಲಿನ ಪ್ರಾಥಮಿಕ ಶಾಲೆಗಳಿಗೆ ಮಂಜೂರು ನೀಡಿ ಶೈಕ್ಷಣಿಕ ಅಭಿವೃದ್ಧಿ ಮಾಡಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) 1991-92ನೇ ಸಾಲಿನಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಗುಲ್ಬರ್ಗಾ ಜಿಲ್ಲಾ ಪರಿಷತ್ತು, ಶಿಕ್ಷಣ ಸ್ಥಾಯಿ ಸಮಿತಿ ಸಭೆಯಲ್ಲಿ ಜಿಲ್ಲೆಯಲ್ಲಿನ 32 ಸ್ಥಳಗಳನ್ನು ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಪ್ರಸ್ತಾವನೆ ಮಂಡಿಸಲಾಗಿತ್ತು. ಈ ಮೇರೆಗೆ 31 ಸ್ಥಳಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

ಆ) ಈ ತಾಂಡಾಗಳನ್ನು ಸದರಿ ಪ್ರಸ್ತಾವನೆಯಲ್ಲಿ ಸೇರಿಸಿರುವುದರಿಂದ ಅಂತಹ ಭಾವನೆ ಬರುವುದಿಲ್ಲ.

ಇ) ವಿಳಂಬಗೊಳಿಸಿರುವುದಿಲ್ಲ.

ಈ) ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ಈ ಮೇಲ್ಕಂಡ ತಾಂಡಾಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**ರಾಜ್ಯದಲ್ಲಿ ವಿದ್ಯುತ್ ಕೊರತೆ ನೀಗಲು ಕೈಗೊಂಡಿರುವ ಕ್ರಮ**

3437 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ತಯಾರಾಗುತ್ತಿರುವ ವಿದ್ಯುಚ್ಛಕ್ತಿ ಸಾಮರ್ಥ್ಯವೆಷ್ಟು?

ಅ) ಬೇರೆ ರಾಜ್ಯಗಳಿಂದ ತರಿಸಿಕೊಳ್ಳತ್ತಿರುವ ವಿದ್ಯುಚ್ಛಕ್ತಿ ಪ್ರಮಾಣವೆಷ್ಟು?

ಆ) ಕರ್ನಾಟಕದಲ್ಲಿ ವಿದ್ಯುತ್ತಿನ ಎಷ್ಟು ಕೊರತೆ ಇರುವುದು?

ಈ) ಈ ಕೊರತೆಯನ್ನು ನೀಗಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಈಗ ದಿನವಹಿ ಸರಾಸರಿ 37.5 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುತ್ತಿದೆ.

ಆ) ರಾಜ್ಯವು ಈಗ ದಕ್ಷಿಣ ವಲಯದಲ್ಲಿರುವ ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ಉತ್ಪಾದನೆ ಆಗುತ್ತಿರುವ ವಿದ್ಯುತ್ತಿನಲ್ಲಿ ತನ್ನ ಪಾಲನ್ನು ಮಾತ್ರ ಪಡೆಯುತ್ತಿದ್ದು ದಿನವಹಿ ಸರಾಸರಿ 7.5 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ತನ್ನು ಪಡೆಯುತ್ತಿದೆ. ಬೇರೆ ರಾಜ್ಯಗಳಿಂದ ಈಗ ವಿದ್ಯುತ್ತನ್ನು ಆಮದು ಮಾಡಿಕೊಳ್ಳುತ್ತಿಲ್ಲ.

ಇ) ಈಗ ರಾಜ್ಯವು ದಿನವಹಿ ಸುಮಾರು 8 ರಿಂದ 10 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ.

ಈ) ಹೆಚ್ಚಿನ ವಿದ್ಯುತ್ ಉತ್ಪಾದನೆಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬೆಂಗಳೂರು ಸಮೀಪದ ಯಲಹಂಕದಲ್ಲಿ 127.92 ಮೆಗಾ ವ್ಯಾಟ್ ಸಾಮರ್ಥ್ಯದ ಒಂದು ಡೀಸಲ್ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ನಿರ್ಮಾಣಮಾಡುತ್ತಿದೆ. ಈ ವಿದ್ಯುತ್ ಉತ್ಪಾದನಾ ಕೇಂದ್ರವು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಿದ ನಂತರ ವಾರ್ಷಿಕ 720 ದಶಲಕ್ಷ ಯೂನಿಟ್ಟು ಹೆಚ್ಚುವರಿ ವಿದ್ಯುಚ್ಛಕ್ತಿ ಉತ್ಪಾದನೆಯಾಗಲಿದೆ. ಇದಲ್ಲದೆ ಕರ್ನಾಟಕ ವಿದ್ಯುತ್ ನಿಗಮವು ಮುಂಬರುವ ವರ್ಷಗಳಲ್ಲಿ ಸುಮಾರು 993.31 ಮೆಗಾ ವ್ಯಾಟ್ ಹೆಚ್ಚು ಸಾಮರ್ಥ್ಯದ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ ಮತ್ತು ರಾಜ್ಯ ಸರ್ಕಾರವು ವಿದ್ಯುತ್ ಉತ್ಪಾದನೆಯಲ್ಲಿ ಖಾಸಗೀ ಸಂಸ್ಥೆಗಳ ಸಹಭಾಗಿತ್ವವನ್ನು ಆಹ್ವಾನಿಸಿದೆ.

**ಪ್ರಾಥಮಿಕ ಸಹಕಾರಿ ಸಂಘಗಳ ಕಾರ್ಯದರ್ಶಿಗಳಿಗೆ ವೇತನ ಶ್ರೇಣಿಯಿಂದ ವಂಚನೆ**

3292 - ಶ್ರೀ ಬಿ. ಎಚ್. ಬನ್ನಿಕೊಡ್ (ಹಿರೇಕೆರೂರು) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರಾಥಮಿಕ ಸಹಕಾರಿ ಸಂಘಗಳ ಕಾರ್ಯದರ್ಶಿಗಳು ಹಾಗೂ ಸಿಬ್ಬಂದಿಗಳು ಸರಿಯಾದ ವೇತನ ಶ್ರೇಣಿ ಇಲ್ಲದೇ ವಂಚಿತರಾಗಿರುವುದನ್ನು ಸರ್ಕಾರ ಗಮನಿಸಿದೆಯೇ?

ಆ) ಸರ್ಕಾರಿ ನೌಕರರಿಗೆ ಇರುವ ಸಂಬಳ ಹಾಗೂ ಸೇವಾ ಸೌಲಭ್ಯಗಳನ್ನು ಪ್ರಾಥಮಿಕ ಸಹಕಾರಿ ಪತ್ತಿನ ವ್ಯವಸಾಯ ಸಂಘಗಳ ಕಾರ್ಯದರ್ಶಿಗಳಿಗೆ ದೊರಕಿಸಿಕೊಡಲು ಸರ್ಕಾರ ಯೋಚಿಸಿದೆಯೆ?

ಇ) ಈ ಬಗ್ಗೆ ಸರಕಾರದ ಕ್ರಮ ಹಾಗೂ ನೀತಿ ಏನು?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಹೌದು.

ಆ) ಇಲ್ಲ.